## ಉಪವಿಭಾಗಾಧಿಕಾರಿಗಳ ನ್ಯಾಯಾಲಯ, ಪುತ್ತೂರು ಉಪವಿಭಾಗ , ಪುತ್ತೂರು

**ಪ್ರಕರಣದ ಸಂಖ್ಯೆ : ಎಡಿಸ್ ಆರ್.ಆರ್.ಟಿ.ಎಸ್.ಆರ್ 315/14-15.**

**ದಿನಾಂಕ : 25-10-2016.**

**ಉಪಸ್ಥಿತರು : ಡಾ. ರಾಜೇಂದ್ರ ಕೆ ವಿ .ಭಾ.ಆ.ಸೇ.**

**ಉಪವಿಭಾಗಾಧಿಕಾರಿ**

**ಪುತ್ತೂರು ಉಪವಿಭಾಗ ಪುತ್ತೂರು**

| ಮೇಲ್ಮನವಿದಾರರು | | ಪ್ರತಿವಾದಿಯವರು |
|---|---|---|
| ಲಿಯೋ ಪಿರೇರಾ, | | ತಹಶೀಲ್ದಾರರು, |
| ಬಿನ್.ದಿ॥ ಇಂತ್ರೂ ಪಿರೇರಾ, | -ಮತ್ತು- | ಬೆಳ್ತಂಗಡಿ ತಾಲೂಕು ದ.ಕ |
| ಅರಂಬೋಡಿ ಗ್ರಾಮ, | | |
| ಬೆಳ್ತಂಗಡಿ ತಾಲೂಕು ದ.ಕ. | | |
| ( ನ್ಯಾಯವಾದಿ ಶ್ರೀ ಧನಂಜಯ ಸುವರ್ಣ ಕೆ ) | | |

**—**

ಪ್ರಸ್ತಾವನೆ :

ಮೇಲ್ಮನವಿದಾರರು ಈ ಮೇಲ್ಮನವಿಯನ್ನು ಕರ್ನಾಟಕ ಭೂಕಂದಾಯ ಅಧಿನಿಯಮ 1964 ರ ಕಲಂ 136 ರನ್ವಯ ಬೆಳ್ತಂಗಡಿ ತಾಲೂಕು ಅರಂಬೋಡಿ ಗ್ರಾಮದ M.R.13/06-07 ರಂತೆ ತಹಶೀಲ್ದಾರರು ನೀಡಿದ ಆದೇಶ ಪ್ರಶ್ನಿಸಿ ಸಲ್ಲಿಸಿರುವುದಾಗಿದೆ.

ಮೇಲ್ಮನವಿದಾರರು ಈ ಮೇಲ್ಮನವಿಯಲ್ಲಿ ಬೆಳ್ತಂಗಡಿ ತಾಲೂಕು ಅರಂಬೋಡಿ ಗ್ರಾಮದ ಸ.ನಂ 71/2 ರ ಪೈಕಿ ವಿಸ್ತೀರ್ಣ 0.25 ಎಕ್ರೆ ಜಮೀನು ಭೂನ್ಯಾಯ ಮಂಡಳಿಯ ಆದೇಶದಂತೆ LRY ನಂ. 100/74-75 ದಿನಾಂಕ : 24-11-1977 ರಲ್ಲಿ ಮೇಲ್ಮನವಿದಾರರ ತಂದೆಯವರಿಗೆ ಮಂಜೂರಾಗಿದ್ದು MUT.232/80-81 ರ ಆದೇಶದಂತೆ ಅವರ ಹೆಸರಿನಲ್ಲಿ ಪಹಣಿಯೂ ದಾಖಲಾಗಿರುತ್ತದೆ. ಮೇಲ್ಮನವಿದಾರರ ತಂದೆ ಇಂತ್ರೋ ಪೆರೇರಾರವರ ಮರಣಾ ನಂತರ ಮಕ್ಕಳ ಹೆಸರಿನಲ್ಲಿ ಎಮ್ ಆರ್ 13/06-07 ರಂತೆ ಮ್ಯುಟೇಶನ್ ಬದಲಾಗಿದ್ದು ಕೈಬರಹ ಪಹಣಿಗಳ ಗಣಕೀಕರಣದ ಸಮಯದಲ್ಲಿ ಸದ್ರಿ ಸ.ನಂ. 71/2 ರ ಪಹಣಿಯು ಕೈ ತಪ್ಪಿ ಹೋಗಿರುತ್ತದೆ.

ಇದರ ಬಗ್ಗೆ ತಹಶೀಲ್ದಾರರಿಗೆ ಮನವಿಯನ್ನು ಸಲ್ಲಿಸಿದ್ದರೂ ಯಾವುದೇ ಪ್ರತಿಕ್ರಿಯೆ ಬಂದಿರುವುದಿಲ್ಲ. ಇದರಿಂದ ಬಾಧಿತರಾದ ಮೇಲ್ಮನವಿದಾರರು ಈ ಪ್ರಾಧಿಕಾರಕ್ಕೆ ಮೇಲ್ಮನವಿ ಸಲ್ಲಿಸಿರುವುದಾಗಿದೆ.

ಸದ್ರಿ ಮೇಲ್ಮನವಿಯನ್ನು ಪರಿಶೀಲಿಸಿ ವಿಚಾರಣೆಗೆ ಒಪ್ಪಿ ಮೇಲ್ಮನವಿದಾರರಿಗೆ ಮತ್ತು ಪ್ರತಿವಾದಿಯವರಿಗೆ ವಿಚಾರಣೆಗೆ ದಿನಾಂಕ : 28-04-2015 ರಂದು ಹಾಜರಾಗುವಂತೆ ನೋಟೀಸು ನೀಡಿ ಸಕಾರಣಗಳಿಗಾಗಿ ಮುಂದೂಡಲಾಗಿ ಅಂತಿಮವಾಗಿ ದಿನಾಂಕ: 05-07-2016 ರಂದು ವಿಚಾರಣೆಗೆ ಕೈಗೆತ್ತಿಕೊಂಡು ಆದೇಶಕ್ಕೆ ಕಾಯ್ದಿರಿಸಲಾಯಿತು.

ಸದ್ರಿ ಪ್ರಕರಣದ ವಿಚಾರಣೆ ಸಮಯ ಪ್ರತಿವಾದಿಯವರು ಹಾಜರಾಗಿರುವುದಿಲ್ಲ. ಮೇಲ್ಮನವಿದಾರರ ಪರ ನ್ಯಾಯವಾದಿಯವರು ಹಾಜರಾಗಿ ಮೇಲ್ಮನವಿಯ ಅಂಶವನ್ನೇ ಪುನರುಚ್ಚರಿಸುತ್ತಾ ಮೇಲ್ಮನವಿದಾರರ ತಂದೆಗೆ ಭೂ ನ್ಯಾಯಮಂಡಳಿಯಿಂದ ಆದೇಶವಾದ ಆದೇಶದ ನಕಲು ಮತ್ತು ಅವರ ಹೆಸರಿಗೆ ಕೈಬರಹದ ಪಹಣಿ ದಾಖಲೆಗಳನ್ನು ಸಲ್ಲಿಸಿದ್ದು, ಮಂಜೂರಾತಿಯಾದ ಬಗ್ಗೆ ಸ್ಪಷ್ಟ ಮಾಹಿತಿ ಇದ್ದು, ಪಹಣಿಗಳ ಗಣಕೀಕರಣದ ಸಮಯದಲ್ಲಿ ಕಂದಾಯ ಇಲಾಖಾ ಅಧಿಕಾರಿಗಳು ಗಣಕಯಂತ್ರದಲ್ಲಿ ಸದ್ರಿ ಸ.ನಂ. ನ್ನು ನಮೂದಿಸಿಲ್ಲವೆಂದು ತಿಳಿದುಬರುತ್ತದೆ. ಆದ್ದರಿಂದ ಅರಂಬೋಡಿ ಗ್ರಾಮದ ಸ.ನಂ. 71/2 0.25 ನ್ನು (ಜಂಟಿ ಖಾತೆಯಂತೆ) ಗಣಕೀಕರಣಗೊಳಿಸಿ ಸದ್ರಿ ಸ.ನಂ. ಪಹಣಿ ಸಿಗುವಂತೆ ಕೋರಿ ವಾದ ಮಂಡಿಸುತ್ತಾರೆ.

ಮೇಲ್ಮನವಿಯ ಎಲ್ಲಾ ಅಂಶಗಳನ್ನು ದಾಖಲೆಗಳನ್ನು ಪರಿಶೀಲಿಸಿದಾಗ ಈ ಜಮೀನು ಮೇಲ್ಮನವಿದಾರರ ತಂದೆ ಇಂತ್ರೋ ಪೆರೇರಾರಿಗೆ ಭೂ ನ್ಯಾಯ ಮಂಡಳಿಯಿಂದ ಮಂಜೂರಾಗಿ ಹಕ್ಕು ಪತ್ರ ದೊರಕಿದ ಬಗ್ಗೆ ನಮೂನೆ 10 ರ ಪ್ರತಿ ನೀಡಿರುತ್ತಾರೆ. ಅದರಂತೆ ಹಕ್ಕು ಬದಲಾವಣೆ ಬಗ್ಗೆ ಮ್ಯುಟೇಶನ್ ಆದೇಶದ ಪ್ರತಿ ನೀಡಿರುತ್ತಾರೆ. ಪಹಣಿಯಾದ ಬಗ್ಗೆ ಕೈಬಹರದ ಪಹಣಿ ಮತ್ತು ವಾರೀಸು ಹಕ್ಕಿನಂತೆ ಖಾತೆ ಬದಲಾವಣೆ ಯಾದ ಬಗ್ಗೆ M.R.13/06-07 ರ ಪ್ರತಿ ಇಟ್ಟಿರುತ್ತಾರೆ. ಅಂತೀಮವಾಗಿ ಗಣಕೀಕರಣ ಪಹಣಿಯಲ್ಲು ಈ ಸ.ನಂ. ವಿಸ್ತೀರ್ಣ ದಾಖಲಾಗಿರುವುದನ್ನು ಮನಗಂಡು ಈ ಕೆಳಗಿನಂತೆ ಆದೇಶಿಸಿದೆ.

**ಆದೇಶ.**

ಮೇಲ್ಮನವಿಯನ್ನು ಪುರಸ್ಕರಿಸಿದೆ.

ಬೆಳ್ತಂಗಡಿ ತಾಲೂಕು ಆರಂಬೋಡಿ ಗ್ರಾಮದ ಸ.ನಂ. 71/2 ವಿಸ್ತೀರ್ಣ 0.25 ಎಕ್ರೆ ಜಮೀನನ್ನು ಮೇಲ್ಮನವಿದಾರರ ಹೆಸರಲ್ಲಿ ಖಾತೆ ದಾಖಲಿಸಲು ಪರಿಶೀಲಿಸಿಕೊಂಡು ನಿಯಮಾನುಸಾರ ಸೂಕ್ತ ಕ್ರಮ ಜರಗಿಸಲು ಬೆಳ್ತಂಗಡಿ ತಹಶೀಲ್ದಾರರಿಗೆ ಆದೇಶಿಸಿದೆ.

ಈ ಆದೇಶವನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ಕೊಟ್ಟು ಬೆರಳಚ್ಚು ಪಡಿಸಿ, ಪರಿಷ್ಕರಿಸಿ ಈ ದಿನ ದಿನಾಂಕ: 28-10-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಉದ್ಘೋಷಿಸಲಾಯಿತು.

Rajendra

ಡಾ. ರಾಜೇಂದ್ರ ಕೆ.ವಿ, ಐ.ಎ.ಎಸ್
ಸಹಾಯಕ ಆಯುಕ್ತರು,
ಪುತ್ತೂರು ಉಪವಿಭಾಗ, ಪುತ್ತೂರು ದ.ಕ

ಪ್ರತಿ: ಮೇಲ್ಮನವಿದಾರರ ಪರ ನ್ಯಾಯವಾದಿ ಶ್ರೀ ಧನಂಜಯ ಸುವರ್ಣ ಕೆ ಬೆಳ್ತಂಗಡಿ ತಾಲೂಕು ಇವರ ಮುಖಾಂತರ ಜ್ಯಾರಿ.

ಪ್ರತಿ: ತಹಶೀಲ್ದಾರರು ಬೆಳ್ತಂಗಡಿ ತಾಲೂಕು ಇವರಿಗೆ ಸೂಕ್ತ ಕ್ರಮಕ್ಕಾಗಿ.